## ಕಳೆದ ಸಂಚಿಕೆಯಲ್ಲಿ



ಡಾ. ರೂಪಾ ಅವರೊಂದಿಗಿನ ಭೇಟಿ ಪ್ರದೀಪ ಮತ್ತು ನಿವೇದಿತಾ ಇಬ್ಬರಲ್ಲೂ ಆತ್ಮವಿಶ್ವಾಸ ಮೂಡಿಸಿತು. ನಿವೇದಿತಾಳ ಸಮಸ್ಯೆಯ ಸ್ವರೂಪದ ಸುಳಿವು ಸಿಕ್ಕರೂ ಅವಳ ಅಂತರಂಗವನ್ನು ಪೂರ್ಣವಾಗಿ ಅರಿಯುವುದು ರೂಪಾ ಅವರಿಗೆ ಸಾಧ್ಯವಾಗಲಿಲ್ಲ. ಸಮಸ್ಯೆಗೆ ಉತ್ತರವನ್ನು ಹಿಪ್ನಾಟಿಸಂ ಮೂಲಕ ಕಂಡುಕೊಳ್ಳಲು ಅವರು ಮುಂದಾದರು. ಆದರೆ, ಅದಕ್ಕೆ ನಿವೇದಿತಾಳ ಸಮ್ಮತಿ ಸೂಚಿಸಬೇಕಾಗಿತ್ತು. ಪ್ರದೀಪ ಹೆಂಡತಿಯನ್ನು ಚಿಕಿತ್ಸೆಗೆ ಒಪ್ಪಿಸಲು ಪ್ರಯತ್ನಿಸಿದ. ಒಲ್ಲದ ಮನಸ್ಸಿನಿಂದಲೇ ಒಪ್ಪಿಕೊಂಡ ನಿವೇದಿತಾ, ಕೈ ಕೊಯ್ದುಕೊಳ್ಳುವ ಮೂಲಕ ಪ್ರತಿಭಟನೆ ವ್ಯಕ್ತಪಡಿಸಿದಳು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ಮಾನಸಿಕ ತಜ್ಞರು ತಮ್ಮ ನಿಜಗುರುತು ಹೇಳಿಕೊಳ್ಳದೆಯೇ ಪರೀಕ್ಷೆ ನಡೆಸಿ ಔಷಧಿ ನೀಡಿದರು. ಆ ಔಷಧಿಯಿಂದ ನಿವೇದಿತಾಳ ಮನಸ್ಸು ತಹಬಂದಿಗೆ ಬಂತು. ಅವಳು ಡಾ. ರೂಪಾ ಅವರ ಹಿಪ್ನಾಟಿಸಂ ಚಿಕಿತ್ಸೆಗೂ ಒಪ್ಪಿಕೊಂಡಳು. ಸಮ್ಮೋಹನ ಚಿಕಿತ್ಸೆಗೆ ತನ್ನನ್ನು ತಾನು ಒಪ್ಪಿಸಿಕೊಂಡ ನಿವೇದಿತಾಳ ಮನಸ್ಸನ್ನು ಡಾ. ರೂಪಾ ಓದತೊಡಗಿದರು. ನೆನಪುಗಳ ಗಣಿಯಿಂದ ಹೊರಬರತೊಡಗಿದ ಸಂಗತಿಗಳು ಅಚ್ಚರಿಹುಟ್ಟಿಸುವಂತಿದ್ದವು. ಕೊನೆಗೂ ಸಮಸ್ಯೆಯ ಬೇರು ಯಾವುದೆನ್ನುವುದು ತಿಳಿಯುವ ಗಳಿಗೆ ಸನ್ನಿಹಿತವಾಯಿತು.

---

ಸಂಕಟವಿದೆ. ನಿಮಗೆ ದ್ರೋಹ ಮಾಡಿದೆ ಎಂಬ ತಪ್ಪಿತಸ್ಥ ಭಾವನೆ ಆಕೆಯನ್ನು ಕಾಡುತ್ತಿದೆ. ತಿಳಿದರೆ ನಿಮ್ಮ ಪ್ರತಿಕ್ರಿಯೆ ಹೇಗಿರುತ್ತದೊ ಎಂಬ ಆತಂಕ ಆಕೆಯನ್ನು ಬಾಧಿಸುತ್ತಿದೆ' ಎಂದವರು ಮಾತು ನಿಲ್ಲಿಸಿ ಪ್ರದೀಪನೆಡೆಗೆ ಗಂಭೀರವಾಗಿ ನೋಡುತ್ತಾ,

'ಪ್ರದೀಪ, ನೀವು ಒಳ್ಳೆಯ ಪತಿ. ಅದಕ್ಕಿಂತಲೂ ಮುಖ್ಯವಾಗಿ ಒಳ್ಳೆಯ ಸಹೃದಯ ವ್ಯಕ್ತಿ. ನಾನು ಗಮನಿಸಿದ ಹಾಗೆ, ಇಲ್ಲಿ ನಿವಿ ತನ್ನ ಬಾಲ್ಯದಲ್ಲಿ ತನ್ನ ತಪ್ಪಿಲ್ಲದೆ ಯಾವುದೋ ಕೆಟ್ಟ ಸ್ಥಿತಿಗೆ ಬಲಿಪಶುವಾಗಿದ್ದಾರೆ. ಆ ಘಟನೆ ಏನೇ ಆಗಿರಲಿ, ಅದರಲ್ಲಿ ಆಕೆಯ ತಪ್ಪಿಲ್ಲ. ಹಾಗಾಗಿ ನೀವು ಅದೆಲ್ಲವನ್ನೂ ಗಣನೆಗೆ ತೆಗೆದುಕೊಳ್ಳದೇ ಆಕೆಗೆ ಸದಾ ಒತ್ತಾಸೆಯಾಗಿ ನಿಲ್ಲುವಿರೆಂಬ ನಂಬಿಕೆ ನನಗಿದೆ. ನಿಲ್ಲುವಿರಿ ತಾನೇ?'

ಆತನ ಮುಖವನ್ನೇ ದೀರ್ಘವಾಗಿ ನೋಡುತ್ತಾ ಪ್ರಶ್ನಿಸಿದರು.

'ಖಂಡಿತಾ ಮೇಡಮ್. ಆಕೆಯ ಏನೇ ನೋವಿದ್ದರೂ ಅದು ನನ್ನದೂ ಕೂಡಾ! ಆಕೆ ಅದೆಲ್ಲದರಿಂದ ಮುಕ್ತವಾಗಿ ಹೊರ ಬಂದರೆ ಅಷ್ಟೇ ಸಾಕು ನನಗೆ' ಎಂದ. ಅವನ ಉತ್ತರದಿಂದ ಡಾ. ರೂಪಾರಿಗೆ ಸಮಾಧಾನ ದೊರಕಿತ್ತು.

'ಯೂ ಆರ್ ಎ ನೈಸ್ ಜಂಟಲ್‌ಮನ್' ಎಂದು ಅಭಿಮಾನ ವ್ಯಕ್ತಪಡಿಸಿದರು. ನಂತರ, 'ನಿಮಗೆ ಪಿಂಕಿ ಎಂದರೆ ಯಾರೆಂದು ಗೊತ್ತಾ?' ಡಾ. ರೂಪಾ ಪ್ರಶ್ನಿಸಿದಾಗ ಪ್ರದೀಪ ಇಲ್ಲವೆನ್ನುವಂತೆ ತಲೆ ಕೊಡವಿದ.

'ತಿಳಿದುಕೊಂಡು ನನಗೆ ಅದು ಯಾರೆಂದು ತಿಳಿಸಿ' ಎಂದು ಹೇಳಿ ಡಾ. ರೂಪಾ ಪ್ರದೀಪನನ್ನು ಕಳಿಸಿ ಕೊಟ್ಟರು.

### ಅಧ್ಯಾಯ–9

ಹೊರ ಬಂದ ಪ್ರದೀಪನಿಗೆ ನಿವಿಯ ಭಾವೋದ್ವೇಗದ ಹಿನ್ನೆಲೆ ಈಗ ಅರಿವಾಗಿ ಅವಳಿಗಾಗಿ ಅವನ ಹೃದಯ ಮಿಡಿದಿತ್ತು. ಅವಳ ಯಾತನೆ, ತುಮುಲ, ಗೊಂದಲ ಎಲ್ಲಕ್ಕೂ ಸರಿಯಾದ ಕಾರಣ ಅರಿಯದೇ, ದಿಕ್ಕು ತೋಚದವನಂತಾಗಿದ್ದ ಅವನಿಗೆ ಈಗ ಎಲ್ಲವೂ ಸ್ಪಷ್ಟವಾಗಿ ಅವಳ ಸಮಸ್ಯೆಗೆ ಒಂದು ಚೌಕಟ್ಟು ಸಿಕ್ಕಿತ್ತು. ಈಗ ಅದನ್ನು ಸರಿಪಡಿಸುವುದಷ್ಟೇ ಬಾಕಿ ಉಳಿದಿತ್ತು. ಡಾ. ರೂಪಾ ಅದನ್ನು ಸಮರ್ಪಕವಾಗಿ ನಿರ್ವಹಿಸಿ ತನ್ನ ನಿವಿಯನ್ನು ಹೊಸತಾಗಿ ತನಗೆ ಮರಳಿಸುವರೆಂಬ ಭರವಸೆ ಅವನಲ್ಲಿ ಖಚಿತವಾಗಿ ಮೂಡಿತ್ತು. ಅವನು ಕಾತುರದಿಂದ ಮನೆಗೆ ಬಂದಾಗ ನಿವಿ ನಿದ್ದೆ ಹೋಗಿದ್ದಳು. ನಿಧಿಯನ್ನು ಆಡಿಸುತ್ತಿದ್ದ ಪ್ರಭಾವತಿ ಪ್ರದೀಪನನ್ನು ಕಂಡು ಎದ್ದು ನಿಂತು,

'ಯಾಕೋ ಬಂದವರೇ ಮಲಗಿ ಬಿಟ್ರು ಅಣ್ಣ. ಸ್ವಲ್ಪ ಸುಸ್ತಾದಂತೆ ಇದ್ದಾರೆ' ಎಂದು ವರದಿ ಒಪ್ಪಿಸಿದಳು.

ಪ್ರದೀಪ ಸದ್ದು ಮಾಡದೆ ಕೋಣೆಯೊಳಗೆ ಕಾಲಿರಿಸಿದಾಗ ಪ್ರಭಾವತಿ ತಿಳಿಸಿದಂತೆ ನಿವಿ ನಿದ್ದೆಯ ಮೋಡಿಯಲ್ಲಿದ್ದಳು. ಅವಳ ಮುಖದಲ್ಲಿ ಬಳಲಿಕೆಯ ಛಾಯೆ ಇತ್ತು. ಅವಳೆಂದೂ ಈ ಹೊತ್ತಿನಲ್ಲಿ ಮಲಗಿದ್ದಿಲ್ಲ. ಬಹುಶಃ ಮನದಲ್ಲಿದ್ದ ದುಗುಡವೆಲ್ಲವೂ ಬಸಿದುಕೊಂಡು ಖಾಲಿಯಾದ ಅನುಭವದಲ್ಲಿ ಹೀಗೆ ಮಲಗಿರಬೇಕು ಎಂದುಕೊಂಡ. ಅವನಿಗೆ ಡಾ. ರೂಪಾ ಅಲ್ಲಿಂದ ಹೊರಡುವಾಗ ಕೇಳಿದ ಪ್ರಶ್ನೆ ನೆನಪಾಗಿ ದುಬೈ ತಲುಪಿದ್ದ ಕೃತ್ತಿಕಾಗೆ ಕರೆ ಮಾಡಿದ.

'ಕೃತ್ತಿಕಾ, ನಿಮ್ಮಲ್ಲಿ ಪಿಂಕಿ ಅಂತ ಯಾರಾದರೂ ಇದ್ದರಾ? ಜಸ್ಟ್ ಕುತೂಹಲಕ್ಕೆ' ಎಂದ.

ಕೃತ್ತಿಕಾ ಉತ್ತರವಾಗಿ, 'ಇಲ್ವಲ್ಲಾ, ಆ ಹೆಸರಿನವರಾರೂ ಇಲ್ಲ ಭಾವ' ಎಂದಳು.

ಪ್ರದೀಪ ಸ್ವಲ್ಪ ನಿರಾಸೆಯಿಂದ, 'ಸರಿ ಬಿಡಿ' ಎಂದು ಸಂಪರ್ಕ ಕಡಿದ. ಕೆಲ ಕ್ಷಣಗಳ ನಂತರ ಕೃತ್ತಿಕಾಳೇ ಕರೆ ಮಾಡಿ, 'ಭಾವ, ಪಿಂಕಿ ಅನ್ನೋದು ನಿವಿಯ ನಿಕ್ ನೇಮ್ ಅಂತೆ. ಅವಳನ್ನು ಚಿಕ್ಕವಳಿದ್ದಾಗ ಪಿಂಕಿ ಎಂದು ಕರೀತಿದ್ರಂತೆ. ಅಪ್ಪ ಹೇಳಿದ್ರು' ಎಂದಳು.

ಆಕೆಯ ಉತ್ತರವನ್ನು ಆಲಿಸಿ ಅವನು ಸೋಜಿಗಗೊಂಡ. ಈ ವಿಚಾರ ನಿವಿಯ ಪತಿಯಾಗಿ ತನಗೇ ಗೊತ್ತಿಲ್ಲ! ಡಾ. ರೂಪಾ ಅವರಿಗೆ ಹೇಗೆ ತಿಳಿಯಿತು? ಸಮ್ಮೋಹನ ಸಂದರ್ಭದಲ್ಲಿ ತನ್ನ ಬಾಲ್ಯದ ಅಡ್ಡ ಹೆಸರಿನ ಪ್ರಸ್ತಾಪ ಏಕೆ ಬಂದಿತು. ಏನಿರಬಹುದು ಇದರ ಹಿನ್ನೆಲೆ?

ಪ್ರದೀಪ ಕೂಡಲೇ ಡಾ. ರೂಪಾ ಅವರಿಗೆ ಕರೆ ಮಾಡಿ ವಿಷಯ ತಿಳಿಸಿದಾಗ ಅವರಿಗೇನೂ ಅಂಥ ಆಶ್ಚರ್ಯ ಆಗಲಿಲ್ಲ. ಹೀಗೊಂದು ಸಾಧ್ಯತೆ ಇರಬಹುದೆಂದು ಅವರು ಮೊದಲೇ ಊಹಿಸಿದ್ದರು. ನಿವೇದಿತಾ, ತಾನು ಹೇಳಬೇಕೆಂದಿರುವ ಆ ಸಂಗತಿ ತನ್ನದೇ ಅನುಭವವೆಂದು ತಿಳಿಸಲಿಚ್ಛಿಸದೇ, ಈ ರೀತಿ ಹೇಳಿಕೊಂಡಿದ್ದಾಳೆ. ನಿಗೂಢ ಮನಸ್ಸು ಕೂಡಾ ಕೆಲವೊಮ್ಮೆ ಎಷ್ಟೊಂದು ಆಟ ಆಡುತ್ತದೆ! ಬಹುಶಃ ಬರುವ ಸೆಷನ್‌ನಲ್ಲಿ ನಿವಿ ಎಲ್ಲವನ್ನೂ ಹೇಳಿಕೊಳ್ಳಬಹುದು. ಅಲ್ಲಿಗೆ ಆಕೆಯ ತೊಳಲಾಟಕ್ಕೊಂದು ಮುಕ್ತಿ ಸಿಗಬಹುದು!

ಡಾ. ರೂಪಾ ಮೂರು ದಿನಗಳ ನಂತರ ನಿವಿಯನ್ನು ತಮ್ಮಲ್ಲಿಗೆ ಮತ್ತೊಂದು ಸೆಷನ್‌ಗೆ ಕರೆತರಲು ತಿಳಿಸಿದ್ದರು. ಪ್ರದೀಪನಲ್ಲಿ ಕೇಳಬೇಕಾಗಿದ್ದ, ಉತ್ತರ ದೊರೆಯಬೇಕಾಗಿದ್ದ ಹತ್ತಾರು ಪ್ರಶ್ನೆಗಳಿದ್ದವೆಂದು ಅವರು ಬಲ್ಲರು. ಅಸಲಿಗೆ ಅದಕ್ಕೆ ದಡ ದೊರಕಿಸಿ ಕೊಡುವುದು ತಮ್ಮ ಕೆಲಸವಾದರೂ, ಒಬ್ಬ ಆಪ್ತ ಸಮಾಲೋಚಕಿಯಾಗಿ, ಮಾನಸಿಕ ತಜ್ಞೆಯಾಗುವುದಕ್ಕಿಂತಲೂ ನಿವಿಯ ಸ್ಥಾನದಲ್ಲಿರುವ ಒಬ್ಬ ಹೆಣ್ಣಾಗಿ, ಪತ್ನಿಯಾಗಿ, ತಾಯಿಯಾಗಿ ಕೂಡಾ ತಾನು ಅರ್ಥ ಮಾಡಿಕೊಳ್ಳಬೇಕಾಗಿದೆ. ಅದಕ್ಕೆ ಸ್ಪಂದಿಸಬೇಕಾಗಿದೆ. ಸಾಂತ್ವನ ದೊರಕಿಸಿಕೊಡಬೇಕಾಗಿದೆ.

ಡಾ. ರೂಪಾ ನಿವಿಯ ಗುಂಗಿನಲ್ಲಿ ಮುಳುಗಿದ್ದರು.

ಆಕೆಯ ಸ್ವತಂತ್ರ ವೃತ್ತಿ ಬದುಕು ಶುರುವಾಗಿ ಹೆಚ್ಚು ಸಮಯ ಆಗದೇ ಹೋದರೂ, ಆಕೆಯ ಬಳಿ ಬಂದ ಕೇಸ್‌ಗಳು ಕಾಣುವಾಗ ಮನುಷ್ಯನ ಮನಸ್ಸು ಎಷ್ಟೊಂದು ನಿಗೂಢ ಲೋಕವೆಂಬುದು ಆಕೆ ಅದನ್ನು ಅನ್ವೇಷಿಸಿದ್ದಷ್ಟೂ, ಆಳಕ್ಕಿಳಿದಷ್ಟೂ, ಅರ್ಥ ಮಾಡಿಕೊಳ್ಳಲು ಪಿಎಚ್.ಡಿ. ಮಾಡಿದರೂ ಅದೊಂದು ಇನ್ನೂ ಅರಿತು ದಕ್ಕಲು ಸಶೇಷವಾಗಿಯೇ ಉಳಿಯುವಂಥ ವಿಷಯ!

ಬೆಳಿಗ್ಗೆ ಇದ್ದಕ್ಕಿದ್ದಂತೆ ಎಂದೋ ಕೇಳಿದ್ದ ಹಾಡು ಧುತ್ತನೇ ನೆನಪಾಗಿ ನಾವು ಗುನುಗುವುದು,